ಮಧ್ಯ ಕಾಲಿನ ಅರ್ಜಿ ನಂ.**16** ರಿಂದ **18**ರ ಆದೇಶದ ಅನ್ವಯ ದಿನಾಂಕಃ **28.08.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಪಿ.ಎನ್.ಕೆ ರವರಿಂದಃ

ನಿಡಿ-**33** ತೀರ್ಪಿನಲ್ಲಿನ ದಾವೆಯಲ್ಲಿ ನಾನು ಪಕ್ಷಗಾರನು ಅಲ್ಲ ಎಂದರೆ ಸರಿ. ನಿಡಿ-**33** ತೀರ್ಪಿನ ದಾವೆಯಲ್ಲಿ ದಾವಾ ಸ್ವತ್ತು ಸೇರಿಕೊಂಡಿಲ್ಲ ಎಂದರೆ ಸರಿ. ಆರ್.ಎಫ್.ಎ ನಂ.**1387/2010** ಮತ್ತು **1345/2010** ಪ್ರಕರಣದಲ್ಲಿಯು ಸಹ ದಾವಾ ಸ್ವತ್ತು ಸೇರಿಕೊಂಡಿಲ್ಲ ಎಂದರೆ ಸರಿ. ನಿಡಿ-**33** ದಾಖಲೆಯು ಈ ಪ್ರಕರಣಕ್ಕೆ ಯಾವುದೇ ರೀತಿಯಾಗಿ ಪರಿನಾಮಕಾರಿಯಾಗಿ ಇರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದೃಢಿಕೃತ ನಕಲು ಪ್ರಮಾಣ ಪತ್ರದಲ್ಲಿನ ಒಂಬಯ್ಯ ಎಂಬುವರ ಸಹಿಯನುನ ತೋರಿಸಿದರೆ ಸಾಕ್ಷಿಯು ಸದರಿ ಸಹಿಯು ಒಂಬಯ್ಯ ಸಹಿ ಆಗಿರುತ್ತದೆ ಎಂದು ಹೇಳಿದ ಮೇರೆಗೆ ಸದರಿ ಪ್ರಮಾಣ ಪತ್ರವನ್ನು ನಿಪಿ-**12** ಎಂದು ಗುರುತಿಸಲಾಯಿತು. ನಿಡಿ-**10** ಜಿ.ಪಿ.ಎ ರಲ್ಲಿ ಇರುವ ಮತ್ತು ನಿಪಿ-**12** ಪ್ರಮಾಣ ಪತ್ರದಲ್ಲಿಯ ಒಂಬಯ್ಯ ರವರ ಸಹಿ ಒಂದೊಕ್ಕೊಂದು ಹೊಲಿಕೆ ಆಗುವುದಿಲ್ಲ ಬೇರೆ ಬೇರೆ ಸಹಿ ಎಂದರೆ ಸರಿಯಲ್ಲ. ನಿಪಿ-**12** ಪ್ರಮಾಣ ಪತ್ರದಲ್ಲಿನ ಸಹಿ ಮಾತ್ರ ಒಂಬಯ್ಯ ರವರ ಸಹಿ ಹಾಕಿದ್ದು ನಿಪಿ-**10** ಜಿಪಿಎ ಯಲ್ಲಿ ಇರುವ ಸಹಿ ಒಂಬಯ್ಯ ರವರ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಡಿ-**10** ಜಿಪಿಎ

ಯಲ್ಲಿ ಇರುವ ಸಹಿಯು ಒಂಬಯ್ಯನ ಸಹಿ ಅಲ್ಲ ಸದರಿ ಸಹಿ ಸೃಷ್ಟತ ಸಹಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-**12** ಋಣಭಾರ ರಾಹಿತ್ಯ ಪತ್ರದಲ್ಲಿ ದಾವಾ ಸ್ವತ್ತಿನ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**16** ಋಟುಣಭಾರ ದಾವಾ ಸ್ವತ್ತಿನ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**17** ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಯರಿನಲ್ಲಿ ದಾವಾ ಸ್ವತ್ತಿನ ಸೈಟ್ ನಂಬರ್ ಉಲ್ಲೇಖ ವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**17** ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರಿನಲ್ಲಿ ಸ್ವತ್ತಿನ ವಿ. **40 x 60** ಇರುತ್ತದೆ ಎಂದರೆ ಸಾಕ್ಷಿಯು ನನ್ನ ಸ್ವತ್ತಿನ ವಿ. **30 x 40** ಇರುತ್ತದೆ. ನಿಡಿ-**17** ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರ್ ನಂ.**113** ಮತ್ತು **114** ಎಂದು ನಮುದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**10** ಜಿಪಿಎ ಯನ್ನು ದಾವಾ ಸ್ವತ್ತಿನ ಮೇಲೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸೃಷ್ಟಿತ ಜಿಪಿಎ ಆಧಾರದ ಮೇಲೆ ನಿಡಿ-**11** ರೀತಿಯಾ ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸೃಷ್ಟಿತ ಜಿಪಿಎ ಮತ್ತು ಕ್ರಯ ಪತ್ರದ ಆದಾರದ ಮೇಲೆ ದಾವಾ ಸ್ವತ್ತಿಗೆ ಸಂಬಂಧಿಸಿ ರೆವಿನ್ಯೂ ದಾಖಲೆಗಳನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-**23** ರಿಂದ **26** ಬಾಡಿಗೆ ಕರಾರು ಪತ್ರವನ್ನು ಪ್ರಕಾರಣಕ್ಕಾಗಿ ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ, ದಾವಾ ಸ್ವತ್ತಿನಲ್ಲಿ ನನ್ನ ಬಾಡಿಗೆದಾರರು ವಾಸ ಇರುವುದಿಲ್ಲ ಆದರೂ ನಿಡಿ-**23** ರಿಂದ **26** ಬಾಡಿಗೆ ಕರಾರು ಪತ್ರವನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯಾದ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಆದರೂ

**ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**